# ಮೈಸೂರ ಗೆಜಿಟ್.

ನಂ. 23 ಸರ್ಕಾರದಿಂದ ಪಾಯಿಷ್ ಆದ್ದು. ಸ್ ೧೮೮೭.

ಬೆಂಗಳೂರು, ಶನಿವಾರ, ಜೂನ್ ತಾ|| 11, ಸ್ ೧೮೮೭.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ಡಿಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ಡಿಟೆಂಡೆಂಟರು, ಕಾಂಪೆಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಜೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಡಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

## ೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

### ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 14ನೇ ಮೇ 1887.

ಕ್ಯಾಂಪ್ ನಂ. 483.—1885ನೇ ಇಸವಿ ಫಿಬ್ರವರೀ 27ನೇ ಮತ್ತು 229ನೇ ನಂಬರುಳ್ಳ ಇಸ್ತಿಹಾರ್‌ನಾಮೆಯಲ್ಲಿ ಪಾಯಿಷ್ ಮಾಡಲ್ಪಟ್ಟ 1ನೇ ನಂಬರ್ ರೂಲ್ಸ್ ಕುರಿತ ಗಾಂಜಾ ಸಾಗುವಳೀದಾರರ ಲೈಸೆನ್ಸ್‌ಯಾನೆ ಪಟ್ಟೀಯ ಇಪ್ಪತ್ತರಡೀಕಂಡ ನಮೂನೆಯು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುತ್ತೆ:—

## ಗಾಂಜಾ ರೂಲ್‌ಶಿಗೆ ಸಂಬಂಧಪಟ್ಟ ಆರ್ಡಿಕ್ಸ್ A.

ಗಾಂಜಾ ಸಾಗುವಳಿದಾರನ ಲೈಸೆನ್ಸಿಯಾನೆ ಪಟ್ಟೆ.

——————ಡಿಸ್ಟ್ರಿಕ್ಟು——————————ತಾಲ್ಲೂಕು ಅಮಲ್‌ದಾರರಿಂದ.

1885ನೇ ಇಸವಿ ಫಿಬ್ರವರೀ 27ನೇ ಮತ್ತು ಂ 229ನೇ ನಂಬರುಳ್ಳ ದಿರ್ಮಾರವರ ಇಸ್ತಿಹಾರ್‌ನಾಮೆಯೊಡನೆ ಫಾಯಿಷ್ ಮಾಡ ಲ್ಪಟ್ಟ Iನೇ ನಂಬರ್ ರೂಲ್ಸ್ ಅನುಸರಿ ಯಿದರದೆಕೇಯಿಂದ——————ತಾಲ್ಲೂಕಿನ——————ಗ್ರಾಮದಲ್ಲಿರುವ——ಗೆ ಲೈಸೆನ್ಸ್ ಕೊಡಲ್ಪಟ್ಟಿರುತ್ತೆ, ಮತ್ತು ಸದರೀ——————ನ ಹಿಡುವಳಿಯಲ್ಲಿರುವ——————ಯಕರೆ————ಗುಂಟೆ ವಿಸ್ತೀರ್ಣ ಉಳ್ಳ————ರೂಪಾಯಿ ಆಕಾರವುಳ್ಳ——ನೇ ನಂಬರ್ ಜಮೀನಿನಲ್ಲಿ ಭಂಗೀಗಿಡ ಸಾಗುವಳೀಮಾಡಿ ಗಾಂಜಾ ಯಂಬ ನಿಷಾ ವಸ್ತುವ ನ್ನ ಇದರಡೀಕಂಡ ಷರತ್ತುಗಳ ಮೇಲೆ ಉತ್ಪತ್ತಿ ಮಾಡುವ ಬಗ್ಗೆ ಇದರಿಂದ ಅಧಿಕಾರ ಕೊಡಲ್ಪಟ್ಟಿರುತ್ತೆ.

I. ತಯಾರ್ಮಾಡಲ್ಪಟ್ಟ ಗಾಂಜಾವಿನ ತೇಡಾದು ಗ್ರಾಮದ ಪಟೇಲ ಮತ್ತು ಶ್ಯಾನುಭೋಗರಿಗೆ ತಿಳಿಸಲ್ಪಟ್ಟು ಅವರ ಸಮಕ್ಷಮ ಆದು ವಜನಿ ಮಾಡಲ್ಪಟ್ಟು ಮತ್ತು ಅದರ ವಿಲಾವಾರಿಯು ಕರಾರ್‌ವಾಕಾ ಆಗಿಯೂ ಕ್ರಮವಾಗಿಯೂ ತೋರಿಸಲ್ಪಡತಕ್ಕದ್ದು.

II. ತಯಾರ್ಮಾಡಲ್ಪಟ್ಟ ಗಾಂಜಾ, ಸಾಧಾರಣವಾಗಿ ವಂಮತಿಂಗಳ ವಳಗಾಗಿಯಾಗಲೀ ಅಥವಾ ಡೆಪ್ಯೂಟಿ ಕಮ್ಮಿಷನರವರಿಂದ ಮುಂದಾಗಿ ಅಪ್ಪಣೆ ಪಡೆದು ಆದು ತಯಾರ್ಮಾಡಲ್ಪಟ್ಟ ಮೂರು ತಿಂಗಳ ವಳಗಾಗಿಯಾಗಲೀ ಗವರ್ನಮೆಂಟ್ ತರಫ: ಕಂಟ್ರಾಕ್ಟುದಾರನಿಗೆ ನ್ಯಾಯವಾದ ಮೌಲ್ಯಕ್ಕೆ ವಿಕ್ರಯಿಸಲ್ಪಡತಕ್ಕದ್ದು, ಯಾ I) ಫಾರಂ ಪ್ರಕಾರ ಲೈಸೆನ್ಸ್ ಅನುಸರಿ ರಫ್ತು ಮಾಡಲ್ಪಡತಕ್ಕದ್ದು. ಇದಕ್ಕೆ ತಪ್ಪಿದರೆ ಗಾಂಜಾ ಜಪ್ತು ಮಾಡಲ್ಪಟ್ಟು ಸರಕಾರದಿಂದ ವಿಕ್ರಯಿಸಲ್ಪಡುವದು.

III. ಲೈಸೆನ್ಸುದಾರನು, ಅವನಿಗೆ ಅಪೇಕ್ಷೆಯಿದ್ದರೆ, ಆವನ ಸ್ವಂತಖರ್ಚಿನ ಬಗ್ಗೆ ಅಮಲ್‌ದಾರರಿಂದ ಕೊಡಲ್ಪಡುವ ಪ್ಯಾಸೆನ ಆಧಾರದ ಮೇಲೆ ಮತ್ತು ಭಂಗಿ ಸಾಗುವಳೀ ಮಾಡಲ್ಪಟ್ಟ ಜಮೀನು ವಂದು ಯಕರೆಗಿಂತ ಕಮ್ಮಿ ಯಿಲ್ಲದ ಪಕ್ಷದಲ್ಲಿ 14 ಪೌಂಡಿಗಳಿಗಿಂತ ಜಾಸ್ತಿ ಅಲ್ಲದ ಗಾಂಜಾವನ್ನ ಉಳಸಿಕೊಳ್ಳಬಹುದು. ಹಾಗಿಲ್ಲದ ಪಕ್ಷದಲ್ಲಿ ಸ್ವಂತ ಖರ್ಚಿನ ಬಗ್ಗೆ ಅವಕಾಶ ಕೊಡಲ್ಪಡಲಾರದು. ಲೈಸೆನ್ಸುದಾರನು ಈ ರೂಲ್ಸ್ ಅನುಸರಿ ತನ್ನ ಸ್ವಂತ ಉಪಯೋಗದ ಬಗ್ಯಾಗಿ ಉಳಸಿಕೊಂಡ ಗಾಂಜಾವೆನ್ನ ವಿಕ್ರಯಿಸಕೂಡದು ಯಾ ಅನ್ಯಥಾ ವಿಲಾ ಮಾಡಕೂಡದು.

IV. ಈ ಲೈಸೆನ್ಸಿಯಾನೆ ಪಟ್ಟೆಯು ವಂದು ವರುಷಕ್ಕೆ ಅಂದರೆ——————ಲಾಯಿತು————ವರಿಗೆ ಜಾರೀಯ ಲ್ಲಿರತಕ್ಕದ್ದು, ಮತ್ತು ಯಿದರಲ್ಲಿಯಾಗಲೀ ಯಕ್ಸೈಸ್ ಆಕ್ಟಿನಲ್ಲಾಗಲೀ ಯಾ ಅದನ್ನನುಸರಿ ಮಾಡಲ್ಪಟ್ಟ ರೂಲ್ಸ್‌ನಲ್ಲಾಗಲಿ ಅಡಗಿ ಯಿರತಕ್ಕ ಯಾವ ಷರತ್ತುಗಳನ್ನಾದರೂ ಉಲ್ಲಂಘಿಸಿದರೆ ಲೈಸೆನ್ಸುದಾರನು ಸದರೀ ಯಕ್ಸೈಸ್ ಆಕ್ಟಿನಲ್ಲಿ ವಿಧಿಸೋಣಾದ ದಂಡನೆಗಳಿಗೆ ಗುರಿಯಾಗತಕ್ಕದ್ದಲ್ಲದೆ ಸಂಬಂಧಪಟ್ಟ ತಪ್ಪಾಂ ನಿಷಾ ಪದಾರ್ಥವೂ ಜಪ್ತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

V. ಈ ಲೈಸೆನ್ಸಿಯಾನೆ ಪಟ್ಟೆಯು, ಮೇಲೆಕಂಡ ಕಲಮಿನಲ್ಲಿ ಕಂಡ ವಾಯಿದೆಯು ಪೂರೈಸಿದ ತರುವಾಯ ತಾಲ್ಲೂಕು ಅಮಲ್‌ದಾರರಿಗೆ ವಾಪಸ್ ಮಾಡಲ್ಪಡತಕ್ಕದ್ದು, ಮತ್ತು ಸದರೀ ಆಫೀಸರರು ತಯಾರ್ ಮಾಡಲ್ಪಟ್ಟ ಗಾಂಜಾ ರಾಂಗೆ ವಿಲೇವಾರಿ ಮಾಡಲ್ಪಟ್ಟಿತೆಂಬ ವಿಷಯ ಅದರಮೇಲೆ ಷರಾ ಮಾಡತಕ್ಕದ್ದು. ಲೈಸೆನ್ಸುದಾರನು ಮೇಲ್ಕಂಡಂತೆ ಲೈಸೆನ್ಸನ್ನ ವಾಪಸ್ ಮಾಡದಿದ್ದರೆ ಆತನು ಯಕ್ಸೈಸ್ ಆಕ್ಟು ಅನುಸರಿ ಫಿರ್ಯಾದ್ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

188—ನೇ ಇಸವಿ————ಮಾಹೆ————ತಾರೀಖಿನಲ್ಲಿ ನಮ್ಮ ಸೈನ್ ಮೊಹರಿನಿಂದ ಕೊಡಲ್ಪಟ್ಟಿರುತ್ತೆ.

ಮೊಹರ್.

ಅಮಲ್‌ದಾರ್

——ತಾಲ್ಲೂಕು.

---

ತಾರೀಖು 14ನೇ ಮೇ 1887.

ನಂ. 16.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗಾ ಮವು ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಪ್ರಾರಂಭವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡಪರಖಾಸ್ತುದಾರರಿಗೆ ಹರಾಜ್ ನಿಲ್ಲುವದು.